ಹಣದ ಮೊತ್ತವೆಷ್ಟು?

ಉತ್ತರಿಸುವ ಸಚಿವರು: ಎಸ್.ಎಂ.ಕೃಷ್ಣ(ಮುಖ್ಯಮಂತ್ರಿಯವರು)

ಉತ್ತರ

1. ಭಾರತ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರ 31.3.2000ರವರೆಗಿನ ವಾರ್ಷಿಕ ವರದಿಯ ಪ್ಯಾರ 3.14ರ ಪ್ರಕಾರ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯಲ್ಲಿ ಯಾವುದೇ ಅವ್ಯವಹಾರ ನಡೆದಿರುವುದಿಲ್ಲ, ಆದರೆ ಲೆಕ್ಕ ಪತ್ರಗಳ ಪರಿಶೋಧನಾ ಅಭಿಪ್ರಾಯಗಳ ಪ್ಯಾರಗ್ರಾಫ್‌ಗಳಲ್ಲಿ ಅವ್ಯವಸ್ಥಿತವಾದ ಕಾರ್ಯವಿಧಾನವನ್ನು ಪ್ರಸ್ತಾಪಿಸಲಾಗಿದೆ.

2. ಸರ್ಕಾರವು ಮೇಲಿನ ಪ್ಯಾರಾಗಳನ್ನು ಸಮಗ್ರ ತನಿಖೆ ಮತ್ತು ವರದಿಗಾಗಿ ಲೋಕಾಯುಕ್ತಕ್ಕೆ ಒಪ್ಪಿಸಿದೆ.

3. ಲೋಕಾಯುಕ್ತ ವರದಿ ನಂತರ ಗೊತ್ತಾಗುವುದು.

ರಾಜ್ಯ ಸರ್ಕಾರ ಪಡೆದಿರುವ ಸಾಲಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 895(1143)

ಸದಸ್ಯರ ಹೆಸರು: ಶ್ರೀ ಅರಗ ಜ್ಞಾನೇಂದ್ರ(ತೀರ್ಥಹಳ್ಳಿ)

ಪ್ರಶ್ನೆ

ಅ) ಕಳೆದ ಮೂರು ವರ್ಷಗಳಿಂದ ಸರ್ಕಾರವು ಈವರೆಗೆ ಪಡೆದಿರುವ ಒಟ್ಟು ಸಾಲದ ಮೊತ್ತವೆಷ್ಟು? (ವಿವರಗಳನ್ನು ನೀಡುವುದು)

ಆ) ಇದರಲ್ಲಿ ಆಂತರಿಕ ಮತ್ತು ಬಾಹ್ಯ ಸಾಲಗಳು ಎಷ್ಟು? (ವರ್ಷವಾರು ಮಾಹಿತಿ ನೀಡುವುದು)

ಇ) ಈ ಸಾಲಗಳಿಗೆ ಪ್ರತಿ ವರ್ಷ ಎಷ್ಟು ಬಡ್ಡಿಯನ್ನು ನೀಡಲಾಗುತ್ತಿದೆ? (ವಿವರ ನೀಡುವುದು)

ಈ) ಇನ್ನೂ ಯಾವ ಯಾವ ಸಂಸ್ಥೆಗಳಿಂದ (ವಿದೇಶಿ, ಆಂತರಿಕ) ಸಾಲ ತರಲು ಯೋಜನೆ

ಮಾಡಲಾಗಿದೆ? ಯಾವ ಯಾವ ಇಲಾಖೆಗೆ ಎಷ್ಟು ಎಷ್ಟು ಸಾಲ ತರಲು ಯೋಚಿಸಲಾಗಿದೆ? (ಇಲಾಖಾವಾರು ವಿವರ ನೀಡುವುದು)

ಉತ್ತರಿಸುವ ಸಚಿವರು: ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿಯವರು)

ಉತ್ತರ

ಅ) ಕಳೆದ ಮೂರು ವರ್ಷಗಳಿಂದ ರಾಜ್ಯ ಸರ್ಕಾರವು ಪಡೆದಿರುವ ಸಾಲದ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಆ) ಆಂತರಿಕ ಸಾಲಗಳನ್ನು ಅನುಬಂಧ-1ರ 'ಎ' ಭಾಗದಲ್ಲಿ ನೀಡಲಾಗಿದೆ. ಬಾಹ್ಯ ಸಾಲವು ಕೇಂದ್ರ ಸರ್ಕಾರದ ಮೂಲಕಾಂತರ ಬರುವುದರಿಂದ ಅನುಬಂಧ-1ರ 'ಬಿ' ಭಾಗದಲ್ಲಿ ನೀಡಿರುವ ವಿವರಗಳಲ್ಲಿ ಸೇರಿರುತ್ತದೆ.

ಇ) ರಾಜ್ಯ ಸರ್ಕಾರವು ಕಳೆದ ಮೂರು ವರ್ಷಗಳಲ್ಲಿ ಪಾವತಿ ಮಾಡಿದ ಬಡ್ಡಿಯ ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.

ಈ) ವಿಶ್ವ ಬ್ಯಾಂಕಿನಿಂದ ಈ ಕೆಳಕಂಡ ಯೋಜನೆಗಳಿಗೆ ಸಾಲವನ್ನು ಪಡೆಯಲು ಪ್ರಸ್ತಾಪಿಸಲಾಗಿದೆ

(ರೂಪಾಯಿ ಕೋಟಿಗಳಲ್ಲಿ)

ಕ್ರ. ಸಂಖ್ಯೆ	ಯೋಜನೆ ಹೆಸರು	ಇಲಾಖೆ	ಸಾಲದ ಪ್ರಮಾಣ
1	ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ	ಲೋಕೋಪಯೋಗಿ ಇಲಾಖೆ	1635.00
2	ಜಲಾನಯನ ಪ್ರದೇಶ ಅಭಿವೃದ್ಧಿ ಯೋಜನೆ	ಜಲಾನಯನ ಅಭಿವೃದ್ಧಿ ಇಲಾಖೆ	543.12
3	ಗ್ರಾಮೀಣ ನೀರು ಸ್ವಾಸ್ಥ್ಯಕೆ, ಪರಿಸರ ಮತ್ತು ನೈರ್ಮಲ್ಯ ಯೋಜನೆ-2ನೇ ಹಂತ	ಗ್ರಾಮೀಣ ಅಭಿವೃದ್ಧಿ ಪಂಚಾಯತ್ ಮತ್ತು ರಾಜ್ ಇಲಾಖೆ	729.00
		ಮೊತ್ತ:	2907.12

ಇದರ ಜೊತೆಗೆ ರಾಜ್ಯ ಸರ್ಕಾರವು ಎಲ್‌ಐಸಿ, ಜೆಐಸಿ, ನಾಬಾರ್ಡ್ ಮತ್ತು ಎನ್‌ಸಿಡಿಸಿ ಯಿಂದ ಸಹ ಸಾಲವನ್ನು ಪಡೆಯಲಿದೆ. ಈ ಸಾಲದ ಪ್ರಮಾಣವನ್ನು ಯೋಜನಾ ಆಯೋಗವು ನಿರ್ಧರಿಸಲಿದೆ.

ಅನುಬಂಧ-I

ವಿದೇಶಿ ಸಂಸ್ಥೆಗಳಿಂದ ರಾಜ್ಯ ಸರ್ಕಾರವು ನೇರವಾಗಿ ಸಾಲವನ್ನು ಪಡೆಯಲು ಸಾಧ್ಯವಿರುವುದಿಲ್ಲ ಬಾಹ್ಯ ಸಾಲವು ಕೇಂದ್ರ ಸರ್ಕಾರದ ಮುಖಾಂತರ ಬಿಡುಗಡೆಯಾಗುತ್ತದೆ. ಕಳೆದ 3 ವರ್ಷಗಳಲ್ಲಿ ರಾಜ್ಯ ಸರ್ಕಾರವು ಪಡೆದ ಸಾಲದ ವಿವರಗಳು ಈ ಕೆಳಗಿನಂತಿರುತ್ತದೆ;

(ಕೋಟಿ ರೂ.ಗಳಲ್ಲಿ)

	1998-99 ಲೆಕ್ಕ	1999-2000 ಲೆಕ್ಕ	2001-02 ಲೆಕ್ಕ
ಎ) **ಆಂತರಿಕ ಸಾಲಗಳು:**			
ಮಾರುಕಟ್ಟೆ ಸಾಲ	701.68	903.88	825.61
ಎಲ್.ಐ.ಸಿ.	10.00	243.26	168.09
ಜಿ.ಐ.ಸಿ.	-	-	28.50
ನಬಾರ್ಡ್ ಸಾಲ	139.89	141.17	212.53
ಎನ್.ಸಿ.ಡಿ.ಸಿ. ಸಾಲ	20.38	6.69	16.39
ಬಿ) **ಕೇಂದ್ರ ಸರ್ಕಾರದಿಂದ ಸಾಲ:**			
ಯೋಜನೇತರ ಸಾಲ	801.44	953.18	1085.85
ರಾಜ್ಯ ಯೋಜನೆಗೆ ಸಾಲ	726.57	900.73	1029.40
ಕೇಂದ್ರ ಪಲಯ ಯೋಜನೆಗೆ ಸಾಲ	0.13	0.17	0.04
ಕೇಂದ್ರ ಪುರಸ್ಕೃತ ಯೋಜನೆಗೆ ಸಾಲ	23.85	23.57	4.78
ಒಟ್ಟು:	2423.94	3172.65	3371.19

ಬಾಹ್ಯ ಸಾಲಗಳು ಕೇಂದ್ರ ಸರ್ಕಾರದ ಮುಖಾಂತರ ಬಿಡುಗಡೆಯಾಗುತ್ತದೆ. ಬಾಹ್ಯ ಸಾಲದ ವಿವರಗಳು ಈ ಕೆಳಗಿನಂತಿದೆ.

ವರ್ಷ	ಮೊತ್ತ
1998-1999	313.60
1999-2000	460.65
2000-2001	565.98
ಒಟ್ಟು	1340.23 *)

*) ಇದು ರಾಜ್ಯ ಯೋಜನೆ ಸಾಲದಲ್ಲಿ ಸೇರಿರುತ್ತದೆ.

ಅನುಬಂಧ-2

ಕಳೆದ ಮೂರು ವರ್ಷಗಳಲ್ಲಿ ವಿವಿಧ ಸಾಲಗಳಿಗೆ ಪಾವತಿಸಿದ ಬಡ್ಡಿಯ ವಿವರಗಳು ಈ ಕೆಳಕಂಡಂತೆ ಇರುತ್ತದೆ:

(ರೂ.ಕೋಟಿಗಳಲ್ಲಿ)

i) ಆಂತರಿಕ ಸಾಲ:	1998-1999 ಲೆಕ್ಕ	1999-2000 ಲೆಕ್ಕ	2000-2001 ಲೆಕ್ಕ
1) ಮಾರುಕಟ್ಟೆ ಸಾಲ	270.99	397.90	476.02
2) ಎಲ್.ಐ.ಸಿ.	16.94	42.43	49.71
3) ಜಿ.ಐ.ಸಿ.	9.44	6.94	9.98
4) ನಬಾರ್ಡ್	24.53	39.09	54.67
5) ಎನ್.ಸಿ.ಡಿ.ಸಿ.	8.42	13.27	16.31
ii) ಕೇಂದ್ರ ಸರ್ಕಾರದಿಂದ ಸಾಲಃ			
6) ಯೋಜನೇತರ	541.82	644.75	782.24
7) ರಾಜ್ಯ ಯೋಜನೆಗೆ ಸಾಲ	396.96	470.80	561.94
8) ಕೇಂದ್ರ ಪುರಸ್ಕೃತ ಯೋಜನೆ	11.24	13.65	15.90
9) ಕೇಂದ್ರ ವಲಯ ಯೋಜನೆ	8.30	8.03	7.75
10) 84-85 ಪೂರ್ವ ಸಾಲಗಳು	20.02	17.63	15.24
iii) ಇತರೆ	302.96	357.78	396.67
ಒಟ್ಟು	1616.61	2012.30	2386.43

ಬಾಹ್ಯ ಸಾಲದ ಮೇಲಣ ಬಡ್ಡಿಯು ರಾಜ್ಯ ಯೋಜನೆಯಲ್ಲಿ ಒಳಗೊಂಡಿರುತ್ತದೆ.

ರಾಜ್ಯ ಯೋಧರಿಗೆ ನೀಡುತ್ತಿರುವ ಸೌಲಭ್ಯಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 897(1141)

ಸದಸ್ಯರ ಹೆಸರು: ಶ್ರೀ ಅರಗ ಜ್ಞಾನೇಂದ್ರ(ತೀರ್ಥಹಳ್ಳಿ)

ಪ್ರಶ್ನೆ

1) ದೇಶದ ಸೈನ್ಯದಲ್ಲಿ ಸೇವೆ ಸಲ್ಲಿಸುತ್ತಿರುವ ರಾಜ್ಯದ ಯೋಧರ ಸಂಖ್ಯೆ ಎಷ್ಟು?

2) ಕಳೆದ 3 ವರ್ಷಗಳಲ್ಲಿ ರಾಜ್ಯದ ಎಷ್ಟು ಜನ ಯೋಧರು ಸೇವೆಯಲ್ಲಿದ್ದಾಗ ಮೃತ ಪಟ್ಟಿದ್ದಾರೆ, ಎಷ್ಟು ಜನ ಅಂಗವಿಕಲರಾಗಿದ್ದಾರೆ? (ವಿವರ ನೀಡುವುದು)

3) ರಾಜ್ಯ ಸರ್ಕಾರ ಮೃತಪಟ್ಟ ಹಾಗೂ ಅಂಗವಿಕಲರಾದ ಯೋಧರಿಗೆ ನೀಡುತ್ತಿರುವ ಸೌಲಭ್ಯಗಳೇನು?

4) ಮೃತಪಟ್ಟ ಯೋಧರ ಕುಟುಂಬಗಳ ಅವಲಂಬಿತರಿಗೆ ಮತ್ತು ಅಂಗವಿಕಲರಾದವರಿಗೆ ಸರ್ಕಾರಿ ಉದ್ಯೋಗ ಕೊಡುವ ಬಗ್ಗೆ ಸರ್ಕಾರದ ನಿಲುವೇನು?

ಉತ್ತರಿಸುವ ಸಚಿವರು: ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು)

ಉತ್ತರ

1) ಸದರಿ ಅಂಕಿ ಸಂಖ್ಯೆಗಳು ಇಲಾಖೆಯಲ್ಲಿ ಲಭ್ಯವಿರುವುದಿಲ್ಲ.

2) ಯುದ್ಧ ಮತ್ತು ಯುದ್ಧದಂತಹ ಕಾರ್ಯಾಚರಣೆಯಲ್ಲಿ 1-1-1999ರಿಂದ 7-10-2001ರವರೆಗೆ ರಾಜ್ಯದ 57 ಜನ ಯೋಧರು ಮೃತರಾಗಿದ್ದಾರೆ. ಇದೇ ಅವಧಿಯಲ್ಲಿ 30 ಜನ ಯೋಧರು ಅಂಗವಿಕಲರಾಗಿದ್ದಾರೆ.

3) ಯುದ್ಧದಲ್ಲಿ ಮಡಿದ ಯೋಧರ ಅವಲಂಬಿತರಿಗೆ ನೀಡುವ ಸೌಲಭ್ಯಗಳು:

1) ರೂ.2 ಲಕ್ಷಗಳ ಪರಿಹಾರಧನ

2) 2 ಎಕರೆ ನೀರಾವರಿ ಜಮೀನು ಅಥವಾ
4 ಎಕರೆ ತೋಟದ ಜಮೀನು ಅಥವಾ
8 ಎಕರೆ ಒಣ ಜಮೀನನ್ನು ಉಚಿತವಾಗಿ ನೀಡಲಾಗುತ್ತಿದೆ. ಅಥವಾ ಇದರ